ಅ) ಕರ್ನಾಟಕ ಗೃಹ ಮಂಡಳಿಯಿಂದ ಆರ್ಥಿಕ ನೆರವು ನೀಡುವ ಯೋಜನೆ ಇಲ್ಲವಾದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆ ಜಾರಿಯಲ್ಲಿ ಇರುವುದಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಇಲ್ಲಿ ನನ್ನ ಮೊದಲನೆ ಪ್ರಶ್ನೆಗೆ ಉತ್ತರವಾಗಿ ಕರ್ನಾಟಕ ಗೃಹ ಮಂಡಳಿಯು ರೇಷ್ಮೆ ಇಲಾಖೆ ಮತ್ತು ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು ರೇಷ್ಮೆ ಬೆಳೆಗಾರರ ಕುಟುಂಬಗಳಿಗೆ ಮನೆ ಕಟ್ಟುವ ಯೋಜನೆಯನ್ನು ಕೈಗೊಂಡಿದೆ ಎಂದು ಹೇಳಿದ್ದೀರಿ. ಹಾಗಿದ್ದರೆ ಇದಕ್ಕೆ ಎಷ್ಟು ಹಣವನ್ನು ತೆಗೆದಿಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರಿ ಅಬ್ದುಲ್ ನಜೀರ್ ಸಾಬ್. ಈಗ ಕಂಡಿಗಲ್ ತಾಲ್ಲೂಕಿನಲ್ಲಿ ಮಾತ್ರ ಈ ಕರ್ನಾಟಕ ಗೃಹ ಮಂಡಳಿಯಿಂದ ೧೯೭ ಮನೆಗಳನ್ನು ರೇಷ್ಮೆ ಬೆಳೆಗಾರರ ಕುಟುಂಬದವರಿಗೆಂದು ಕಟ್ಟಿಸಲಾಗಿದೆ. ಈ ಬಾಬಿಗೆ ರೇಷ್ಮೆ ಇಲಾಖೆಯವರು ಸ್ವಲ್ಪ ಹಣ ಕೊಡುತ್ತಾರೆ. ಈ ಹಣದ ಜೊತೆಗೆ ಹೌಸಿಂಗ್ ಬೋರ್ಡಿನವರು ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು ಮನೆಗಳನ್ನು ಕಟ್ಟುತ್ತಾರೆಯೇ ಹೊರತು ಇದಕ್ಕಾಗಿಯೇ ಹೌಸಿಂಗ್ ಬೋರ್ಡಿನಲ್ಲಿ ಹಣವನ್ನು ತೆಗೆದಿಟ್ಟಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ನಾನು ಈ ಬಗ್ಗೆ ಪ್ರಶ್ನೆ ಕೇಳಿದ ಉದ್ದೇಶವೇನೆಂದರೆ ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆಯವರು ಹೊರಡಿಸಿದಂಥ ಒಂದು ಪುಸ್ತಕದಲ್ಲಿ ರೇಷ್ಮೆ ಬೆಳೆಗಾರರಿಗೆ ಹುಡ್ಕೊ ಸಂಸ್ಥೆಯಿಂದ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಇದೆ ಎಂದು ಪ್ರಚಾರ ಮಾಡಿದ್ದರು. ಆದ್ದರಿಂದ ಆ ಪುಸ್ತಕದಲ್ಲಿರಬಹುದಾದಂಥ ಕಾರ್ಯಕ್ರಮಗಳು ಅನುಷ್ಠಾನದಲ್ಲಿ ಬರುತ್ತವೆಯೋ ಅಥವಾ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವ ಕುತೂಹಲದಿಂದ ನಾನು ಈ ಪ್ರಶ್ನೆ ಕೇಳಿದ್ದು.

ಶ್ರೀ ಅಬ್ದುಲ್ ನಜೀರ್ ಸಾಬ್.— ನಾನು ಮೊದಲೇ ಹೇಳಿದಂತೆ ಇದಕ್ಕೆ ಒಂದು ಯೋಜನೆ ಇದೆ. ಈ ಕೆಲಸಕ್ಕೊಂದು ರೇಷ್ಮೆ ಇಲಾಖೆಯವರು ಹೌಸಿಂಗ್ ಬೋರ್ಡಿಗೆ ಸ್ವಲ್ಪ ಹಣ ಕೊಡುತ್ತಾರೆ. ನಂತರ ಹೌಸಿಂಗ್ ಬೋರ್ಡಿನವರು ಹುಡ್ಕೊ ಸಂಸ್ಥೆಯಿಂದ ಸಾಲ ಪಡೆದು ಮನೆಗಳನ್ನು ಕಟ್ಟುತ್ತಾರೆ. ಇಲ್ಲಿ ಹೌಸಿಂಗ್ ಬೋರ್ಡು ಒಂದು ಏಜೆನ್ಸಿಯಾಗಿ ಕೆಲಸ ಮಾಡುತ್ತದೆಯೇ ಹೊರತು ಹೌಸಿಂಗ್ ಬೋರ್ಡಿಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾಗಿ ಹಣವನ್ನು ಇಟ್ಟಿಲ್ಲ.

ಕರ್ನಾಟಕ ಭೂ ಸೇನಾ ನಿಗಮ.

೧೩೫೩. ಶ್ರೀ ಜಿ. ರಾಜಗೌಡ (ಹನೂರು) —ವಾಣಿಜ್ಯ ಉದ್ಯಮಗಳಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಭೂ ಸೇನಾ ನಿಗಮ ಯಾವಾಗ ಈ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿದೆ ? ಇದರ ಮೂಲ ಬಂಡವಾಳವನ್ನು ಹೇಗೆ ಪಡೆದಿರುತ್ತೆ ?

ಆ) ಈಗ ಇದು ಹೊಂದಿರುವ ಚರ ಹಾಗೂ ಸ್ಥಿರ ಆಸ್ತಿಯ ಮೌಲ್ಯವೇನು ?

ಇ) ಇದುವರೆಗೆ ಎಷ್ಟು ಪೊತ್ತದ ಕಾಮಗಾರಿಗಳನ್ನು ಮಾಡಿದೆ ?

ಈ) ಈಗ ನಿಗಮದ ಬಂಡವಾಳ ಎಷ್ಟಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್(ವಾಣಿಜ್ಯೋದ್ಯಮಗಳಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು).—

ಅ) ಕರ್ನಾಟಕ ಭೂ ಸೇನಾ ನಿಗಮವು ಅಸ್ತಿತ್ವಕ್ಕೆ ಬಂದ ದಿನಾಂಕ ೯-೮-೧೯೭೪. ಮೂಲ ಬಂಡವಾಳ ೨೫.೦೦ ಲಕ್ಷ ರೂಪಾಯಿಗಳನ್ನು ಕರ್ನಾಟಕ ಸರಕಾರದಿಂದ ಪಡೆದಿರುತ್ತೆ. (ರೂ. ೧೨.೯೬ ಲಕ್ಷ ರೂಪಾಯಿ ಮಾಫಿನ ರೂಪದಲ್ಲಿ ಮತ್ತು ೧೨.೦೪ ಲಕ್ಷ ರೂ. ಋಣದ ರೂಪದಲ್ಲಿ ಪಡೆದಿರುತ್ತೆ).

ಅ) ನಿಗಮದ ಚರ ೧೫೩.೯೪೧ ಲಕ್ಷ ಹಾಗೂ ಸ್ಥಿರ ಆಸ್ತಿ ೦.೧೬೯ ಲಕ್ಷ ರೂಪಾಯಿಂಗಳು ೩೧–೩–೧೯೮೬ರ ಕೊನೆಗೆ ಮತ್ತು ಇಳಂವರಿ ನಿಧಿ ರೂ. ೧೨೨.೦೯ ಲಕ್ಷ ರೂಪಾಯಿಗಳಂ.

ಆ) ೧೯೭೪–೭೫ ರಿಂದ ೧೯೮೫–೮೬ರವರೆಗೆ ಕಾವಂಗಾರಿಯಂ ಮೊತ್ತ ರೂ. ೪೧೫೬.೦೦ ಲಕ್ಷ ರೂಪಾಯಿಗಳಂ.

		(ರೂ, ಲಕ್ಷಗಳಲ್ಲಿ)
೧)	೧೯೭೪–೭೫ ರಿಂದ ೧೯೮೨–೮೩ ರವರೆಗೆ	೧೪೨೨.೦೦
೨)	೧೯೮೩–೮೪ರಲ್ಲಿ	೫೩೩.೦೦
೩)	೧೯೮೪–೮೫ರಲ್ಲಿ	೮೧೫.೦೦
೪)	೧೯೮೫–೮೬ರಲ್ಲಿ	೧೩೧೬.೦೦
	ಒಟ್ಟು ರೂ.	೪೧೫೬.೦೦ ಲಕ್ಷ

ಈ) ರೂಪಾಯಿ ೨೫.೦೦ ಲಕ್ಷಗಳು.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಸರ್ಕಾರದಿಂದ ಮೂಲ ಬಂಡವಾಳ ಪಡೆದಿರತಕ್ಕದ್ದು ೨೫ ಲಕ್ಷ ರೂಪಾಯಿಂಗಳು. ಅಷ್ಟು ಹಣ ಈಗ ಇದೆಯೇ ? ಕಳೆದ ವರ್ಷ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ. ಮತ್ತೆ ಇದರ ಶಾಖೆಯನ್ನು ಬೇರೆ ಕಡೆ ವಿಸ್ತರಿಸಲಿಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಎಲ್ಲಿ ಹೆಚ್ಚು ಕೆಲಸಗಳನ್ನು ಸಹಿಸುತ್ತಾರೋ ಅಲ್ಲಿ ಶಾಖೆಗಳನ್ನು ಪ್ರಾರಂಭ ಮಾಡುತ್ತಾರೆ ೩ ಸಾವಿರ ಜನ ಪ್ರತಿನಿತ್ಯ ಗ್ರಾಮಾಂತರ ಪ್ರದೇಶಗಳಲ್ಲಿ ಭೂ ಸೇನಾ ನಿಗಮದ ಕೆಳಗೆ ಕೆಲಸ ಮಾಡುತ್ತಾರೆ ಎಂದು ಅಂದಾಜು. ೩೨ ಸಾವಿರ ಜನ ದಿನಗೂಲಿ ಮೇಲೆ ಕೆಲಸ ಮಾಡುತ್ತಾ ಇದ್ದಾರೆ.

ಶ್ರೀ ಜಿ. ರಾಜೂಗೌಡ.—ಕರ್ನಾಟಕ ಭೂ ಸೇನಾ ನಿಗಮ ಕೈಗೊಂಡಿರತಕ್ಕ ಕೆಲಸಗಳನ್ನು ಗುಣಮಟ್ಟದಲ್ಲಿ ಪರೀಕ್ಷೆ ಮಾಡುವುದಕ್ಕೆ ಯಾವುದಾದರೂ ತಾಂತ್ರಿಕ ಸಮಿತಿಯನ್ನು ನೇಮಿಸಿದ್ದೀರಾ, ನೇಮಿಸಿದ್ದರೆ ಅದರ ಫಲಿತಾಂಶ ಏನು ? ಲೋಕೋಪಯೋಗಿ ಇಲಾಖೆಯ ಟೆಂಡರ್ ಕೆಲಸಗಳಲ್ಲಿ ಭೂ ಸೇನಾ ನಿಗಮ ಭಾಗವಹಿಸಲಿಕ್ಕೆ ಆಗಂತ್ತದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಇದಂವರೆಗೆ ಕೆಲವು ಕಡೆ ಮಾಡಿದ್ದಾರೆ, ಎಲ್ಲಾ ಕಡೆ ಮಾಡಲಿಕ್ಕೆ ಅವಕಾಶವಿಲ್ಲ. ಸಾಕಷ್ಟು ಕೆಲಸಗಳನ್ನು ಮಾಡುತ್ತಾ ಇದ್ದಾರೆ. ಟೆಂಡರ್ ಕೆಲಸದಲ್ಲಿ ಭಾಗವಹಿಸುವ ಪ್ರಶ್ನೆ ಉದ್ಭವಿಸಂವುದಿಲ್ಲ. ಗುಣವಂಬ್ಬದ ಬಗ್ಗೆ ಹೇಳುವುದಾದರೆ, ಭೂಸೇನಾ ನಿಗಮಂದಲ್ಲಿ ಸಾಕಷ್ಟು ತಾಂತ್ರಿಕ ಪರಿಣಿತರು ಇದ್ದಾರೆ. ಅವರು ಗುಣಮಟ್ಟವನ್ನು ಪರೀಕ್ಷೆ ಮಾಡುತ್ತಾರೆ. ಗುಣಮಟ್ಟ ಸರಿಯಿಲ್ಲದೇ ಹೋದರೆ ಯಾವ ವ್ಯಕ್ತಿ ಕೆಲಸ ಮಾಡುತ್ತಾನೋ ಅವನಿಂದ ವಸೂಲಂ ಮಾಡಳಕ್ಕ ಕಾರ್ಯಕ್ರಮ ಇದೆ.

ಚಿತ್ತಾಪುರದಲ್ಲಿ ಖಂತುಮಾನ ನೀರಂ ಯೋಜನೆ

೯೫೧ (ಸಿ). ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ತಾಪುರ ತಾಲ್ಲೂಕಿನಲ್ಲಿರುವ ಕುಲಕುಂದಾ ಮಳಗ, ತುನ್ನೂರು, ಮಂತ್ತು ಮಾಡಗಿ ಗ್ರಾಮಗಳು ಭೀಮಾ ನದಿಯ ದಂಡೆಯ ಮೇಲೆ ಇದ್ದು ಈ ಎಲ್ಲಾ ಗ್ರಾಮಂಗಳಂ ಒಟ್ಟಿಗೆ ೪ ಕಿ.ಮೀ. ಅಂತರದ ಒಳಗಡೆ ಇವೆ ಎಂಬುದಂ ಸರ್ಕಾರದ ಗಮನದಲ್ಲಿದೆಯೇ ?